# ಕರುಣೆಯ ಕಥನಗಳು

ಈಚೆಗೆ ಕೆಲವಾರು ವರ್ಷಗಳಿಂದ ವಿರಳವಾಗಿ ಹೊರಬರುತ್ತಿರುವ ಜನಪದ ಕಲಾವಿದರ ಆತ್ಮಕಥನಗಳನ್ನು ಒಂದು ಶತಮಾನದ ತಾರುಣ್ಯದಿಂದ ಕೂಡಿರುವ ಕನ್ನಡ ಜಾನಪದ ಸಾಹಿತ್ಯಕವಾಗಿ ಮತ್ತು ಕಲೆಯ ವಿಸ್ತೃತ ರೂಪವಾಗಿ ತನ್ನೊಳಗೆ ಸ್ವೀಕರಿಸಿದೆ. ಈ ಮೂಲಕ ಜನಪದ ಕಲಾವಿದರು ತಮ್ಮ ಕಲಾ ಬದುಕಿನ ನೆನಪನ್ನು ದಾಖಲಿಸಿ, ಅದಕ್ಕೊಂದು ಸಾಮಾಜಿಕ ಚೌಕಟ್ಟನ್ನು ಒದಗಿಸಿಕೊಟ್ಟಿದ್ದಾರೆ. ಈ ಕಥನಗಳು ಅವರು ಬಾಳಿ ಬದುಕಿದ ವಿವರಗಳನ್ನಷ್ಟೇ ಅಲ್ಲದೆ, ಈ ದೇಶದ ಅಕ್ಷರಸ್ಥ ಸಂಸ್ಕೃತಿಯ ವಕ್ತಾರನಂತಿರುವ 'ಇತಿಹಾಸ'ದ ದಾಖಲೆಗಳು ಒಳಗೊಳ್ಳದ ಅದೆಷ್ಟೋ ಲೋಕದರ್ಶನವನ್ನು, ಸರಳ ಮತ್ತು ಸೌಂದರ್ಯದ ಚೌಕಟ್ಟಿನಲ್ಲಿ ನಿರುದ್ವಿಗ್ನವಾಗಿ ಹೇಳುತ್ತವೆ. ವಸ್ತುನಿಷ್ಠ ದೃಷ್ಟಿಕೋನದಿಂದ ನೋಡಿದರೆ, ಜನಸಾಮಾನ್ಯರ ಬದುಕಿನ ತತ್ತ್ವಜ್ಞಾನದಂತಿರುವ ಈ ನಿರೂಪಣೆಗಳಲ್ಲಿ ಜೀವನದ ನಡವಳಿಕೆಗಳು ಮತ್ತು ಕಲೆಯ ವಿವರಗಳು ಬೇರ್ಪಡಿಸಲು ಆಗದಷ್ಟರಮಟ್ಟಿಗೆ ಹೆಣೆದುಕೊಂಡಿವೆ. ಕಲೆ ಮತ್ತು ಬದುಕನ್ನು ಪ್ರತ್ಯೇಕವಾಗಿ ನೋಡದ ಜನಪದರ ಮನಸ್ಸು ಇವೆರಡನ್ನೂ ತನ್ನೊಳಗೆ ಮೇಳೈಸಿಕೊಂಡು ಪೂರ್ವಗ್ರಹ ಮತ್ತು ಭಾವುಕತೆಯಿಲ್ಲದೆ ತಣ್ಣಗಿನ ಭಾಷೆಯಲ್ಲಿ ಪೂರ್ಣತೆಯ ರೂಪ ನೀಡಿದೆ. ಹೀಗೆ ದನಿಹೀನರ ಸಾಮಾಜಿಕ ಅಂತಸ್ಸನ್ನು, ಸಾಮರಸ್ಯ ಮತ್ತು ಹೊಂದಾಣಿಕೆಗಳ ಉತ್ಕೃಷ್ಟ ರೂಪವಾದ ಜನಪದ ಕಲಾವಿದರ ಆತ್ಮಕಥೆಗಳ ನಿರೂಪಣೆಗಳು ಎತ್ತರಕ್ಕೇರಿಸಿವೆ.

ಜನಪದರ ಆತ್ಮಕಥನಗಳ ಓದಿನಲ್ಲಿ, ಸಾಮಾನ್ಯರ ನಡುವೆ ಹಾಸುಹೊಕ್ಕಾಗಿರುವ ಬಡತನ, ಕೀಳರಿಮೆ, ಅಸಹಾಯಕತೆ, ಸಾರ್ವಜನಿಕ ಅವಮಾನಗಳು – ಇವೆಲ್ಲವೂ ನಮ್ಮನ್ನು ಕಾಡುವುದು ಸಹಜ. ಆದರೆ ನಮ್ಮ ಓದು ಈ ಬಗೆಯ ಭಾವನಾತ್ಮಕತೆಯ ನೆಲೆಯನ್ನು ದಾಟಿ, ಅಸಮಭಾವ, ಸಾಮಾಜಿಕ ತಾರತಮ್ಯ ಹಾಗೂ ಚರಿತ್ರೆಯೊಂದಿಗೆ ಅವರ ಸಂಪರ್ಕವನ್ನು ಕಡಿದುಹಾಕಿರುವುದರ ಬಗ್ಗೆ ಎಚ್ಚರ ಮೂಡಿಸಿಕೊಳ್ಳಬೇಕಾಗಿದೆ. ಜನಪದರ ಆತ್ಮಕಥನಗಳ ಓದು ಭಾರತದ ಜಾತಿಪದ್ಧತಿಯ ಕರಾಳರೂಪವನ್ನು, ಭೂಮಿ ಮತ್ತು ಸಂಪತ್ತಿನ ಹಿಡಿತಹೊಂದಿರುವ ಆಳುವ ವರ್ಗದ ಹಿತಾಸಕ್ತಿಯನ್ನು ಪ್ರತ್ಯಕ್ಷವಾಗಿ ನಮ್ಮ ಮುಂದೆ ನಿಲ್ಲಿಸುತ್ತದೆ. ಈ ಬರಹಗಳು ಸೃಷ್ಟಿಸುವ ಸಾಂಸ್ಕೃತಿಕ ಆಕೃತಿಗಳ ಮೇಲೆ ನಮ್ಮ ಆಸಕ್ತಿ ಹರಿಯಬೇಕಾಗಿದೆ. ನಾಡಾಡಿಗಳ ಬದುಕಿನ ಈ ನಿರೂಪಣೆಗಳು ಈಗಿರುವ ಸಾಹಿತ್ಯ ಸಿದ್ಧಾಂತಕ್ಕೇನೂ ಹೊಸತನ್ನು ನೀಡಲು ಸಾಧ್ಯವಿಲ್ಲ ಎಂದು ವಾದಿಸಬಹುದು! ಆದರೆ ಈ ಕಥನಗಳು ಬದುಕಿನ ಬಗ್ಗೆ ನಮ್ಮ ಜನಪದರು ಸೃಷ್ಟಿಸಿಕೊಂಡಿರುವ ಲೋಕದೃಷ್ಟಿ ಹೊಲಬುಗೆಟ್ಟಿರುವ ಇಂದಿನ ಸಮಾಜಕ್ಕೆ ಅಗತ್ಯವಾದ ವಿವೇಕವನ್ನು ಮೂಡಿಸಬಲ್ಲವು. ಈ ಕಥನಗಳು ಶಬ್ದಗಳಲ್ಲಿ ಹೇಳಿರುವ ಯಾತನೆಗಳಿಗಿಂತ, ಶಬ್ದಗಳಾಚೆಗೂ ಉಳಿದಿರುವ ಅವರ ಬದುಕಿನ ಸಂಕಟಗಳನ್ನು ಅರಿಯಲು ಸಂವೇದನಾಶೀಲ ಓದುಗನಿಗೆ ಅನುವುಮಾಡಿಕೊಡುತ್ತವೆ. ಗ್ರಂಥಸ್ಥ ಲೋಕದ ಎದುರಿನಲ್ಲಿ ಹೀಗೆ ಒಮ್ಮೆಲೆ ಕಾಣಿಸಿಕೊಳ್ಳುವ ನಿರ್ಲಕ್ಷಿತ ಸಮುದಾಯಗಳ ಅಭಿವ್ಯಕ್ತಿಯನ್ನು 'ನ್ಯಾಯ ನಿರೂಪಣೆಗಳು' ಎಂದು ಅವುಗಳನ್ನು ಎದುರುಬದರು ನಿಲ್ಲಿಸದೆ 'ಸಹ ನಿರೂಪಣೆಗಳು' ಎಂದೇ ನಾವು ಬೆಸೆಯೋಣ. ಬಹುತ್ವದ ಸಮಾಜದಲ್ಲಿ ಉಳಿಯಬೇಕಾದ ಕಥನಗಳು ಇವು.

ಜನಪದರ ಆತ್ಮಕಥನಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವ ಸಂಗತಿಯೆಂದರೆ ಹಸಿವು, ಬಡತನ, ಜೀವನಪ್ರೀತಿ, ಸ್ವಾಭಿಮಾನ ಹಾಗೂ ಅಪರಿಮಿತ ಸಹನೆ. ಇವೆಲ್ಲವೂ ಜನಪದ ಕಲಾವಿದರ ಜೀವನದ ಸ್ವೀಕೃತ ಮೌಲ್ಯವೇನೋ ಎನ್ನುವಷ್ಟರಮಟ್ಟಿಗೆ ಹಾಸುಹೊಕ್ಕಾಗಿವೆ. ಆದರೆ ಇವೆಲ್ಲವೂ ಒಳಗೇ ಸುಡುತ್ತಿರುವ ಬೆಂಕಿ. ಜನಪದ ಕಲಾವಿದರದು ಬೋಧಿಸತ್ವನ ಮನಸ್ಸು. ತಮ್ಮನ್ನು ಕೀಳರಿಮೆ, ಬಡತನದ ಅಭದ್ರ ಸ್ಥಿತಿಗೆ ತಂದೊಡ್ಡಿದ ಸಾಮಾಜಿಕ ವ್ಯವಸ್ಥೆಯ ಬಗೆಗೆ ಎಲ್ಲೂ ಕಹಿ ಭಾವನೆಯನ್ನು ತಳೆಯುವುದಿಲ್ಲ. ಇವರ ನಿರೂಪಣೆಗಳು ದಯೆ ಮತ್ತು ಕಾರುಣ್ಯದ ಒಡಲಿನಿಂದ ಹುಟ್ಟುಪಡೆದಿವೆ. ಇವು ಯಾವುದೇ ಒಂದು ನಿರ್ದಿಷ್ಟ ಪಂಗಡಕ್ಕೆ ಸೀಮಿತಗೊಳ್ಳದೆ ಹಾಗೂ ಅನ್ಯಧರ್ಮ ನಿಂದನೆಗೆ ತೊಡೆತಟ್ಟಿ ನಿಲ್ಲುವುದಿಲ್ಲ. ತನ್ನಂತೆ ಇರುವ ಎಲ್ಲರನ್ನೂ ಒಳಗೊಳ್ಳುವ ಮತ್ತು ಗೌರವಿಸುವ ನಿಷ್ಕಳಂಕ ಮನಸ್ಸು ಜನಪದ ಕಲಾವಿದರದ್ದು. ತಮ್ಮ ಕಲೆ, ಕೌಶಲ ಹಾಗೂ ಪಾರಂಪರಿಕ ಜ್ಞಾನಗಳೊಂದಿಗೆ ಕವಲೊಡೆಯುವ ಮೂಕ ಜನತೆಯ ಅಭಿವ್ಯಕ್ತಿ ಇವಾಗಿವೆ.

ಉದಾರವಾದಿ ಪರಂಪರೆಯ ಎಲ್ಲ ಸಂಬಂಧಗಳಿಂದ ತನ್ನನ್ನು ಬೇರ್ಪಡಿಸಿಕೊಳ್ಳುತ್ತಿರುವ ಆಧುನಿಕೋತ್ತರ ಸಮಾಜ, ಜನಪದ ಕಲಾವಿದರು, ವಚನಕಾರರು, ಕನಕ, ಕುವೆಂಪು ಹಾಗೂ ತತ್ತ್ವಪದಕಾರರ ಹೃದಯವಂತಿಕೆಯಿಂದ ಸ್ಫೂರ್ತಿ ಪಡೆಯಬೇಕಾಗಿದೆ. ಹತಾಶೆಗಳ ನಡುವೆಯೂ ಬದುಕುವ ದಿಟ್ಟ ಛಲ ಮತ್ತು ಜನಪದರ ಕಲೆಗಳ ಚೈತನ್ಯವನ್ನು ಅಳಿಸಿಹಾಕಲು ಇದುವರೆಗೂ ಭಾರತದ ಯಾವ ಪಾಶವಿ ಶಕ್ತಿಗಳಿಗೂ ಸಾಧ್ಯವಾಗಿಲ್ಲ. ಈ ಕಥನಗಳಲ್ಲಿ ನಾವು ಕಂಡರಿಯದ ನೂರಾರು ಭಾರತಗಳಿವೆ. ಜಾತಿ, ಮತ, ಧರ್ಮಗಳನ್ನು ಮೀರಿದ ಮಾನವೀಯ ಸಂಬಂಧಗಳಿವೆ. ಕೂಡಿ ಬಾಳುವ ಸಮಾಜದ ಆದರ್ಶಗಳು ಈ ನಿರೂಪಣೆಗಳ ದರ್ಶನವೂ ಆಗಿದೆ. ಭಾರತದಂತಹ ಬಹುತ್ವದ ಸಮಾಜದಲ್ಲಿ ಮಾತ್ರ ಜರುಗುವ ಪವಾಡವಿದು! ಭಾರತದಂತಹ ಭೀಕರ ಅಸಮತೆಯುಳ್ಳ ಸಾಮಾಜಿಕ ವ್ಯವಸ್ಥೆಯೊಳಗೆ, ಹೆಚ್ಚಿನ ಪ್ರಮಾಣದಲ್ಲಿ ಕೆಳಸಮುದಾಯಗಳಿಂದ ಬಂದ ಜನಪದ ಕಲಾವಿದರನ್ನು ಪ್ರತ್ಯೇಕಿಸಿರುವ ಬಲಿಷ್ಠ ಗೋಡೆಗಳನ್ನು ಛಿದ್ರಗೊಳಿಸಿ, ಎಲ್ಲರನ್ನೂ ಒಂದುಗೂಡಿಸಲು ಇರುವ ಹತ್ತಾರು ದಾರಿಗಳಲ್ಲಿ ಜನಪದರ ಮೌಖಿಕ ಅಭಿವ್ಯಕ್ತಿಗಳು, ವಚನಕಾರರು, ತತ್ತ್ವಪದಕಾರರು ಹಾಗೂ ಸಂತರ ಪಥಗಳೂ ನಮಗೆ ಮುಖ್ಯ.

ದೈನಂದಿನ ಹೋರಾಟದಲ್ಲಿಯೇ ಇಡೀ ಆಯುಷ್ಯ ಸವೆಸುವ ಶ್ರಮಜೀವಿಗಳ ಬದುಕಿನ ದಾರುಣ ಕಥನಗಳಿಗೆ ಕಿವಿಗೊಡುವ ಅನಿವಾರ್ಯತೆ ಕನ್ನಡ ಸಾಹಿತ್ಯಕ್ಕೆ ಇಲ್ಲದಿರಬಹುದು; ಆದರೆ ಧಾರ್ಮಿಕ ಸಹಿಷ್ಣುತೆ, ಬಹುತ್ವವನ್ನು ಗೌರವಿಸುವ ವಚನಕಾರರು, ತತ್ವಪದಕಾರರು ಮತ್ತು ಜನಪದ ಕಲಾವಿದರ ಮಾತುಗಳು ಸಮುದಾಯಗಳನ್ನು ಜೋಡಿಸುವ ಅದ್ಭುತ ಕಲೆಗಾರಿಕೆಯನ್ನು ತಮ್ಮೊಳಗೆ ಮೈಗೂಡಿಸಿಕೊಂಡಿವೆ. ಇಂತಹ ವಿವೇಕದ ಪರಂಪರೆಯಿಂದ ಬಂದ ಸೊಲ್ಲು ಪ್ರಕ್ಷುಬ್ಧ ಮನಸ್ಸಿನ ಇಂದಿನ ಸಮಾಜಕ್ಕೆ ಮತ್ತು ಸಮಕಾಲೀನ ಸಾಹಿತ್ಯ ಪರಂಪರೆಯೊಂದಕ್ಕೆ ಅಗತ್ಯವಿದೆ.

■ **ಜೆ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಶಿಕ್ಷಣ ಎನ್ನುವುದು ಸಮೃದ್ಧಿಯಲ್ಲಿ ಆಭರಣ ಇದ್ದಂತೆ. ಪ್ರತಿಕೂಲ ಸಂದರ್ಭದಲ್ಲಿ ಆಶ್ರಯತಾಣದಂತೆ.
  —ಅರಿಸ್ಟಾಟಲ್
- ಸೂರ್ಯನಂತೆ ಹೊಳೆಯುವ ಆಸೆ ನಿಮಗೆ ಇದ್ದರೆ, ಮೊದಲು ಸೂರ್ಯನಂತೆ ಹೊತ್ತಿ ಉರಿಯುವುದನ್ನು ಕಲಿಯಿರಿ.
  —ಎ.ಪಿ.ಜೆ. ಅಬ್ದುಲ್ ಕಲಾಂ
- ಜಗತ್ತಿನಲ್ಲಿ ನೋಡಲು ನೀವು ಬಯಸುವ ಬದಲಾವಣೆ ಮೊದಲು ನೀವೇ ಆಗಬೇಕು. ನೀವೇ ಆಗಿ ಆ ಬದಲಾವಣೆ.
  —ಮಹಾತ್ಮ ಗಾಂಧಿ
- ಮನುಷ್ಯನಲ್ಲಿ ಪರಿಪೂರ್ಣತೆಯನ್ನು ಹಿಗ್ಗಿಸುವುದೇ ಶಿಕ್ಷಣ.
  —ಸ್ವಾಮಿ ವಿವೇಕಾನಂದ
- ಬುದ್ಧಿವಂತಿಕೆ ಮತ್ತು ಅತ್ಯುತ್ತಮ ನಡತೆ ಕಲಿಸುವುದೇ ಶಿಕ್ಷಣದ ಮುಖ್ಯ ಗುರಿ.
  —ಮಾರ್ಟಿನ್ ಲೂಥರ್
- ಓದು ಬಲ್ಲವ ತನ್ನ ಸಮುದಾಯಕ್ಕೆ ಶಿಕ್ಷಣ, ಮೂಢನಂಬಿಕೆ, ದೌರ್ಜನ್ಯಗಳ ಬಗ್ಗೆ ತಿಳಿಸಲಿಲ್ಲ ಎಂದರೆ ವ್ಯಕ್ತಿ ಬದುಕಿದ್ದರೂ ಸತ್ತಂತೆ.
  —ಬಿ.ಆರ್. ಅಂಬೇಡ್ಕರ್
- ಪುಸ್ತಕ ಪಾಂಡಿತ್ಯಕ್ಕಿಂತ, ಅನುಭವಕ್ಕೆ ಹೆಚ್ಚಿನ ಬೆಲೆ.
  —ಕ್ಯಾಡ್ಮನ್